ಊಟದ ಕೌಂಟರುಗಳ ಮುಂದೆ ಪರ ಊರುಗಳಿಂದ ಬಂದವರು ಸಾಲುಗಟ್ಟಿ ನಿಂತರೆ ಇನ್ನು ಕೆಲವರು ಜನತಾ ದರ್ಶನದ ಕ್ಯೂನಲ್ಲಿ ನಿಂತರು. ಊರ ರಸ್ತೆಯಲ್ಲಿ ಪೊಲೀಸರು ಥಾಳಾಗಿ ಕಾಣುತ್ತಿದ್ದರು. ನಡುನಡುವೆ ಗರಿ ಗರಿ ಖಾದಿ ಬಟ್ಟೆ ತೊಟ್ಟ ಬಿಳಿಕೊಕ್ಕರೆಗಳಂತಹ ಪುಢಾರಿಗಳು. ಅವರ ಕೈಯಲ್ಲಿ ಸುತ್ತಿ ಹಿಡಿದ ಅರ್ಜಿಗಳು... ಹತ್ತಾರು ಜನ ಏದುಸಿರು ಬಿಡುತ್ತ ಮುಖ್ಯಮಂತ್ರಿಗಾಗಿ ಪ್ರತ್ಯೇಕ ಸಾಲಿನಲ್ಲಿ ಕಾದು ಕೂತಿದ್ದರು.

'ಡೀಸಿ, ಎಸ್.ಪಿ.ಯವರು ಮುಖ್ಯಮಂತ್ರಿಗಳ ಅನುಕೂಲಕ್ಕೆ ವ್ಯವಸ್ಥೆ ಮಾಡುತ್ತಾರೆಂದ ಮೇಲೆ ನಮಗೆ ಹೆಚ್ಚಿನ ಖರ್ಚು ಬರುವುದಿಲ್ಲ. ಸಮಾರಂಭವನ್ನು ಸರಿಯಾಗಿ ಮಾಡಿದರೆ ಸಾಕು' ಎಂದು ಯೋಚಿಸಿದರಲ್ಲದೆ, ಹೆಗಲ ಮೇಲೆ ಇದ್ದ ದೊಡ್ಡ ಹೊರೆ ಇಳಿಸಿಕೊಂಡವರಂತೆ ಹಗುರ ಭಾವ ತಾಳಿದರು. ಅದರ ಬೆನ್ನಲ್ಲೇ ಮುಖ್ಯಮಂತ್ರಿಗಳು ಯಾರ ಮನೆಯಲ್ಲಿ ಉಳಿದುಕೊಳ್ಳುತ್ತಾರೆ? ಎಂಬ ಪ್ರಶ್ನೆ ಹಾಕಿಕೊಂಡು ಉತ್ತರ ಹುಡುಕಿದರು.

ಮುಖ್ಯಮಂತ್ರಿ "ನಮ್ಮವರು" ಅವರು ನಮ್ ಮನೆಯಲ್ಲೇ ಇರ್ತಾರೆ ಎಂದು ಊರಿನ ಅನುಕೂಲಸ್ಥರೊಬ್ಬರು ಹೇಳಿದರೆಂದು ಸುದ್ದಿಯಾಯಿತು. ಚೇರ್ಮನ್ನರು 'ನಾನು ಹೊಸಳ್ಳಿಯ ಪ್ರಥಮ ಪ್ರಜೆ. ಮುಖ್ಯಮಂತ್ರಿ ನನ್ನ ಮನೆಯಲ್ಲೇ ಉಳೀತಾರೆ... ಅವರಿಗೆ ರವಷ್ಟೂ ಕೊರೆ ಆಗದಂತೆ ನೋಡಿಕೊಳ್ಳೊ ಜವಾಬುದಾರಿ ನನ್ನದು' ಅಂತ ಪಂಚಾಯ್ತಿ ಸದಸ್ಯರ ಮುಂದೆ ಹೇಳಿದರೆಂದು ಸುದ್ದಿ ಹರಡಿತು.

'ಚೇರ್ಮನ್ರ ಮನೆ ಸರ್ಕಾರಿ ಹಾಸ್ಟೆಲ್ ಇದ್ದಂಗಿದೆ. ಮನೆ ತುಂಬಾ ಮಕ್ಕಳು. ಅಂಗಳದಲ್ಲೇ ದನಗಳನ್ನ ಕಟ್ತಾರೆ, ಸೊಳ್ಳೆ, ನೊಣಗಳ ಕಾಟ... ಅವರ ಮನೆಯಲ್ಲಿ ಮುಖ್ಯಮಂತ್ರಿಗೆ ನಿದ್ದೆಯಾದರೂ ಹೆಂಗೆ ಬರುತ್ತೆ... ಇನ್ನೂರು ಕೋಟಿ ಆಸ್ತಿ ಒಡೆಯರಾದ ಮುಖ್ಯಮಂತ್ರಿ ಚೇರ್ಮನ್ರ ಹಳೇ ಮಾಳಿಗೆ ಮನೆಯಲ್ಲಿ ಉಳಿದು ಕೊಳ್ತಾರಾ' ಇತ್ಯಾದಿ ಮಾತಾಡಿಕೊಂಡರು. ಮುಖ್ಯಮಂತ್ರಿ ಒಂದು ರಾತ್ರಿ ಕಳೆಯುವಂತಹ ಅನುಕೂಲಗಳು ನಮ್ಮ ಊರಲ್ಲಿ ಇಲ್ಲವಲ್ಲ ಎಂದು ಕೆಲವರು ಯೋಚಿಸಿ ಬೇಸರಪಟ್ಟುಕೊಂಡರು.

## ಭಾಗ – 2

'ಮುಖ್ಯಮಂತ್ರಿ ಬರೋ ಹೊತ್ತಿಗೆ ಊರು ಕ್ಲೀನಾಗಬೇಕು. ಹೈಸ್ಕೂಲಿನಿಂದ ಊರಬಾಗಿಲವರೆಗೆ ರಸ್ತೆ ಅಕ್ಕಪಕ್ಕ, ಮನೆಗಳ ಮುಂದೆ ಹಾಕಿರುವ ಕಲ್ಲು ಮಣ್ಣು, ಇಟ್ಟಿಗೆ, ಕಟ್ಟಿಗೆ ಕೊರಡುಗಳನ್ನೆಲ್ಲ ಎತ್ತಿ ಹಾಕಬೇಕು. ಮುಖ್ಯಮಂತ್ರಿ ಬರೋ ದಿನ ಮನೆಗಳ ಮುಂದೆ ದನಕರು ಕಟ್ಟಬಾರದು, ರಸ್ತೆಯಲ್ಲಿ ಗಾಡಿಗಳನ್ನು ನಿಲ್ಲಸಬಾರದೆಂದು' ಚೇರ್ಮನರೇ ಊರಲ್ಲಿ ಅಡ್ಡಾಡಿ, ಪ್ರತಿಯೊಂದೂ ಮನೆಗಳವರಿಗೆ ಹೇಳಿ ಬಂದರಲ್ಲದೆ ಡಂಗೂರವನ್ನೂ ಹೊಡೆಸಿದರು.

ಊರಲ್ಲಿ ಗಡಿಬಿಡಿ ಹೆಚ್ಚಾಯಿತು. ಕಾರ್ಯಕ್ರಮಕ್ಕೆ ಎಂಟು ದಿನ ಉಳಿಯಿತು. ಅದೇ ದಿನ ತರಾತುರಿಯಲ್ಲಿ ಡೀಸಿ ಮತ್ತು ಎಸ್.ಪಿ. ಸಾಹೇಬರು ಹೊಸಳ್ಳಿಗೆ ಬಂದರು. ಪಂಚಾಯ್ತಿ ಆಫೀಸಿಗೆ ಸ್ವಾಗತ ಸಮಿತಿಯ ಸದಸ್ಯರನ್ನು ಕರೆಸಿಕೊಂಡು ಸಭೆ ಮಾಡಿದರು.

'ಹೈಸ್ಕೂಲು ಪ್ರೊಗ್ರಾಂ ಒನ್ ಅವರ್‌ನಲ್ಲಿ ಮುಗಿಬೇಕು ಅಂತ ಡಿಸೈಡ್ ಮಾಡಿದೀವಿ... ಸಿಎಂ